# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

ಕುಲಸಚಿವರು (ಮೌಲ್ಯಮಾಪನ) ದೂರವಾಣಿ: 08392-241011


ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸ್ನಾತಕ/ಮಎ,ಛಾಪ್ರ,ಮಮೌ/2017–18/1170 ದಿನಾಂಕ: 11/07/2017

## ಅಧಿಸೂಚನೆ

ವಿಷಯ: ಸ್ನಾತಕ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮರು ಎಣಿಕೆ, ಛಾಯಾಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಕರೆಯುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 11/07/2017

****

ಮೇ/ಜೂನ್–2017 ರ ತಿಂಗಳಿನಲ್ಲಿ ಜರುಗಿದ ಎಲ್ಲಾ ಸ್ನಾತಕ ಪದವಿ ಪರೀಕ್ಷೆಗಳ 6ನೇ ಸೆಮಿಸ್ಟರ್‌ನ (Fresher & Repeater) ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ದಿನಾಂಕಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ | ವಿವರ | ಕೋರ್ಸ್ | ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ |
|---|---|---|---|
| 1. | ಮರು ಎಣಿಕೆ | ಒಂದು ವಿಷಯಕ್ಕೆ ರೂ. 165/– | 12/07/2017 ರಿಂದ 18/07/2017 ರ ವರೆಗೆ |
| 2. | ಛಾಯಾ ಪ್ರತಿ | ಒಂದು ವಿಷಯಕ್ಕೆ ರೂ. 330/– | 12/07/2017 ರಿಂದ 18/07/2017 ರ ವರೆಗೆ |
| 3. | ಮರು ಮೌಲ್ಯಮಾಪನ | ಒಂದು ವಿಷಯಕ್ಕೆ ರೂ. 770/– (ಪ.ಜಾ/ಪ.ಪಂ.ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ರೂ.385/–) | 12/07/2017 ರಿಂದ 31/07/2017 ರ ವರೆಗೆ |

**ಸೂಚನೆಗಳು:**

1. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ವೆಬ್‌ಸೈಟ್‌ನ್ನು (www.vskub.ac.in & results.logisys.net.in/vskub) ಸಂಪರ್ಕಿಸಿ, ಆನ್‌ಲೈನ್ ಮೂಲಕ ನಿಗಧಿತ ದಿನಾಂಕದೊಳಗೆ ಅರ್ಜಿ ಸಲ್ಲಿಸತಕ್ಕದ್ದು.
2. ಆನ್‌ಲೈನ್ ಪೋರ್ಟಲ್‌ನಲ್ಲಿ ಫಲಿತಾಂಶ ವೀಕ್ಷಿಸಿದ ನಂತರ, ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನ ಆಯ್ಕೆಗಳಲ್ಲಿ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿ click ಮಾಡಬೇಕು.
3. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಯಾವ ಯಾವ ವಿಷಯಗಳಲ್ಲಿ ಅರ್ಜಿ ಸಲ್ಲಿಸಬೇಕೋ ಅವುಗಳನ್ನು ಆಯ್ಕೆ ಮಾಡಿಕೊಳ್ಳುವುದು.
4. ಮರು ಎಣಿಕೆ, ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಯಾವ ಯಾವ ವಿಷಯಗಳಲ್ಲಿ ಅರ್ಜಿ ಸಲ್ಲಿಸಲು ಆಯ್ಕೆ ಮಾಡಿದ ತಕ್ಷಣ ಅದಕ್ಕೆ ಸಂಬಂಧಿಸಿದ ಶುಲ್ಕ ಪ್ರಕಟಗೊಳ್ಳುವುದು. ನಂತರ ಶುಲ್ಕ ಪಾವತಿಸುವ ಬಗೆಯನ್ನು ಆಯ್ದುಕೊಂಡ ಮೇಲೆ ಅರ್ಜಿ ಹಾಗೂ ಚಲನ್‌ಗಳ ಮುದ್ರಿತ ಪ್ರತಿಯನ್ನು ತೆಗೆದುಕೊಂಡು ಹತ್ತಿರದ ಅಂಚೆ ಕಛೇರಿಯಲ್ಲಿ ಶುಲ್ಕವನ್ನು ಪಾವತಿಸಿ, ಅರ್ಜಿ ಹಾಗೂ ಚಲನ್ ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು.
5. ಶುಲ್ಕ ಪಾವತಿಸಿದ ನಂತರ ಬರುವ "Unique Application Number"ನ್ನು ವಿಶ್ವವಿದ್ಯಾಲಯದ ಜೊತೆ ಮಾಡುವ ಪತ್ರ ವ್ಯವಹಾರಗಳಲ್ಲಿ ನಮೂದಿಸಬೇಕು.
6. ವಿದ್ಯಾರ್ಥಿಗಳು ಅರ್ಜಿ, ಚಲನ್ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಜಾತಿ/ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ತಮ್ಮ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಸಲ್ಲಿಸುವುದು.
7. ಮರು ಎಣಿಕೆ ಮತ್ತು ಮರುಮೌಲ್ಯಮಾಪನದ ಫಲಿತಾಂಶವನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ನೀಡಲಾಗುವುದು ಹಾಗೂ ಛಾಯಾ ಪ್ರತಿಯನ್ನು ವಿದ್ಯಾರ್ಥಿಗಳ ಈ–ಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು.
8. ವಿದ್ಯಾರ್ಥಿಗಳು ತಮ್ಮ ಈ–ಮೇಲ್ ವಿಳಾಸವನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸತಕ್ಕದ್ದು ಹಾಗೂ ತಪ್ಪಾಗಿ ಈ–ಮೇಲ್ ವಿಳಾಸವನ್ನು ನಮೂದಿಸಿದಲ್ಲಿ ಅದಕ್ಕೆ ವಿದ್ಯಾರ್ಥಿಗಳೇ ಹೊಣೆಗಾರರು.

ಕುಲಸಚಿವರು (ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University,
Jnana Sagar Campus, Vinayakanagar,
Cantonment, BALLARI-583 104.

ಗೆ,

ಸಂಬಂಧಿಸಿದ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ – ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.